ನ್ಯಾಯಮೂರ್ತಿ ಕುಲದೀಪ್ ಸಿಂಗ್ ಆಯೋಗದ ವರದಿ

752 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಮೂರ್ತಿ ಕುಲದೀಪ್‌ಸಿಂಗ್ ಆಯೋಗದ ವರದಿಯನ್ನು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ

ಆ) ಹಾಗಿದ್ದಲ್ಲಿ, ಯಾವಾಗ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಕೆ.ಎ.ಐ.ಸಿ. ಗಾಲಪಾನೀಯದ ಪ್ಯಾಕೆಟ್‌ಗಳ ಬಗ್ಗೆ

754 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989 ಮತ್ತು 1990ರಲ್ಲಿ ಕೆಎಐಸಿ ಗಾಲ ಪಾನೀಯದ ಪ್ಯಾಕೆಟ್‌ಗಳನ್ನು ಎಷ್ಟು ತಯಾರಿಸಿದೆ?

ಆ) ಅದರಲ್ಲಿ ಎಷ್ಟು ಪ್ಯಾಕೆಟ್‌ಗಳಷ್ಟು ಗಾಲ ಪಾನೀಯದ ಪ್ಯಾಕೆಟ್‌ಗಳನ್ನು ಅವಧಿ ಮಿರಿದ್ದೆಂದು ನಾಶಪಡಿಸಲಾಗಿದೆ?

ಇ) ಅವಧಿ ಮೀರುವುದರೊಳಗಾಗಿ ಹಣ್ಣಿನ ರಸದ ಪ್ಯಾಕೆಟ್‌ಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಏನಾದರೂ ಕ್ರಮ ಕೈಗೊಂಡಿದೆಯೇ?

ಈ) ಮೇಲೆ ಹೇಳಿದ ನಷ್ಟಕ್ಕೆಲ್ಲಾ ಯಾರು ಹೊಣೆ?

ಉ) ಹಣ್ಣಿನ ರಸದ ಪ್ಯಾಕೆಟ್‌ಗಳನ್ನು ತಯಾರಿಸುವ ಹಂತದಲ್ಲಿ ಮಾರುಕಟ್ಟೆ ಪರಿವೀಕ್ಷಣೆಯನ್ನು ಸರ್ವೆ ನಡೆಸಲಾಗಿತ್ತೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) 1989 - 15,23,268 ಪ್ಯಾಕೆಟ್

1990 - 8,73,117 ಪ್ಯಾಕೆಟ್

ಆ) 1,04,760 ಪ್ಯಾಕೆಟ್‌ಗಳು ದಾಸ್ತಾನಿನಲ್ಲಿದೆ.

ಇ) ಅವಧಿ ಮೀರುವುದರೊಳಗಾಗಿ ಹಣ್ಣಿನ ರಸದ ಪ್ಯಾಕೆಟ್‌ಗಳನ್ನು ರಿಯಾಯತಿ ದರದಲ್ಲಿ ಮತ್ತು ಆಕರ್ಷಿಕ ಯೋಜನೆಗಳನ್ನು ಅಳವಡಿಸಿ, ಮಾರಾಟ ಮಾಡಲಾಯಿತು.

ಈ) ಹವಾಮಾನ ವೈಪರೀತ್ಯಗಳು ಹಾಗೂ ಸಿಗಮ ಕೈಗೊಂಡ ಈ ಹೊಸ ವ್ಯವಹಾರಕ್ಕೆ ಡೀಲರ್‌ಗಳ ಕೊರತೆ ಮತ್ತು ಕಠಿಣ ಹಾಗೂ ಸ್ಪರ್ಧಾತ್ಮಕ ಮಾರುಕಟ್ಟೆ ಸ್ಥಿತಿ, ಕಾರಣಗಳಿಂದ ತಯಾರಿಸಿದ ಎಲ್ಲಾ ಹಣ್ಣಿನ ಪ್ಯಾಕೆಟ್‌ಗಳನ್ನು ಸಕಾಲದಲ್ಲಿ ಮಾರಾಟ ಮಾಡಲು ಸಾಧ್ಯವಾಗಲಿಲ್ಲ. ಇದಕ್ಕೆ ವೈಯಕ್ತಿಕ ಹೊಣೆಗಾರಿಕೆ ನಿಗಧಿಸಲು ಕಷ್ಟವಾಗುತ್ತದೆ.

ಉ) ಹೌದು.

ಮನೆ ಅಥವಾ ನಿವೇಶನವನ್ನು ಹೊಂದಿರುವ ಆಂಗ್ಲೋ ಇಂಡಿಯನ್ ಕುಟುಂಬದವರ ಬಗ್ಗೆ

135 - ಶ್ರೀ ಡೆರ್ರಿಕ್ ಎಂ. ಪುಲ್ಲಿನ್‌ಘಾ (ನಾಮ ನಿರ್ದೇಶನ ಹೊಂದಿದವರು): ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮನೆ ಅಥವಾ ನಿವೇಶನವನ್ನು ಹೊಂದಿರುವ ಆಂಗ್ಲೋ ಇಂಡಿಯನ್

ಕುಟುಂಬದವರ ಸಂಖ್ಯೆ?

ಆ) ರಾಜ್ಯದಲ್ಲಿ ಲೇಕಪಾ 98 ರಷ್ಟು ಆಂಗ್ಲೋ ಇಂಡಿಯನ್ ಸಮುದಾಯದವರು ಬಾಡಿಗೆದಾರರಾಗಿರುತ್ತಾರೆ ಹಾಗೂ ಯಾವ ಮನೆಯೂ ಇರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಕಡಿಮೆ ವೆಚ್ಚದ ಗೃಹ ನಿರ್ಮಾಣ ಯೋಜನೆಯನ್ನು ಲಿಂಗರಾಜುಪುರದಲ್ಲಿ ನಿಯೋಜಿಸಲಾಗಿದೆಯೇ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಗಣತಿ ಮಾಡಿಲ್ಲ.

ಆ) ನಿರ್ದಿಷ್ಟ ಅಂಕಿ ಅಂಶಗಳಿಲ್ಲ.

ಇ) ಸಧ್ಯಕ್ಕೆ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಕಡಿಮೆ ವೆಚ್ಚದ ಗೃಹ ನಿರ್ಮಾಣ ಯೋಜನೆಯನ್ನು ಲಿಂಗರಾಜಪುರದಲ್ಲಿ ನಿಯೋಜಿಸಿರುವುದಿಲ್ಲ.

ಚಿಂತಾಮಣಿ ಪುರಸಭೆಯ ಜಮೀನಿನ ಅನಧಿಕೃತ ವಶ

128 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ವಸತಿ ಮತ್ತು ನಗರಾಭಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಚಿಂತಾಮಣಿ ಪುರಸಭೆಯ 3ನೇ ವಿಭಾಗದಲ್ಲಿ ಕೆಳಕಂಡ ಚಕ್ಕುಬಂದಿಯುಳ್ಳ ಪುರಸಭೆಯ ಜಮೀನನ್ನು ಎಷ್ಟು ಜನ ಅನಧಿಕೃತವಾಗಿ ವಶಪಡಿಸಿಕೊಂಡಿರುತ್ತಾರೆ.
ಉತ್ತರಕ್ಕೆ : ಪುರಸಭೆಯ ನೀರಿನ ಟ್ಯಾಂಕ್‌ನ ಮುಂಭಾಗದ ರಸ್ತೆ.
ಪೂರ್ವಕ್ಕೆ : ನಾಗನಾಥೇಶ್ವರ ದೇವಸ್ಥಾನದ ಬೀದಿ.
ಪಶ್ಚಿಮಕ್ಕೆ: ದೇವಲಂ ಚಿಕ್ಕವೆಂಕಟಸ್ವಾಮಿಯವರ ವಾಸದ ಮನೆ.
ದಕ್ಷಿಣಕ್ಕೆ : ಪರಿಶಿಷ್ಟ ಜಾತಿಯವರ ಭಜನೆ ಮಂದಿರ.

ಬಿ) ಸದರೀ ಜಮೀನಿನ ವಿಸ್ತೀರ್ಣ ಹಾಗೂ ಹಾಲಿ ಮಾರುಕಟ್ಟೆ ದರ ಜೊತೆಗೆ ಸ್ಥಳದ ನಕ್ಷೆಯನ್ನು ಒದಗಿಸಿ.

ಸಿ) ಸದರೀ ಜಮೀನಿನಲ್ಲಿ ಅನಧಿಕೃತವಾಗಿ ವಶಪಡಿಸಿಕೊಂಡಿರುವ ವ್ಯಕ್ತಿಗಳ ವಿಳಾಸ (ವಿವರವನ್ನು ಒದಗಿಸಿ)

ಡಿ) ಸರ್ಕಾರವು ಮೇಲ್ಕಂಡ ಜಮೀನಿನಲ್ಲಿ ವಶಪಡಿಸಿಕೊಂಡಿರುವವರಿಗೆ ಏನಾದರೂ ಮಂಜೂರಾತಿ ನೀಡಿದೆಯೇ?

ಇ) ಮಂಜೂರಾತಿಯಾಗಿದ್ದಲ್ಲಿ ಪ್ರತಿಯೊಂದು ಪ್ರಕರಣಕ್ಕೆ ಸರ್ಕಾರದ ಆದೇಶವನ್ನು ಒದಗಿಸುವುದು.

ಎಫ್) ಸರ್ಕಾರ ಮಂಜೂರು ಮಾಡದೇ ಇದ್ದಲ್ಲಿ ಮೇಲ್ಕಂಡ ಬೆಲೆ ಬಾಳುವ ಜಮೀನನ್ನು ಖಾಲಿ ಮಾಡಿಸಲು ಸರ್ಕಾರವು ಕೈಗೊಂಡಿರುವ ಕ್ರಮ ಏನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಎ) ಪಟ್ಟಿಯನ್ನು ಅನುಬಂಧ - ಎ ಮತ್ತು ಬಿ ನಲ್ಲಿ ಲಗತ್ತಿಸಿದೆ.

ಬಿ) ಸಾರ್ವಜನಿಕದಿಂದ ಅನಧಿಕೃತವಾಗಿ ವಶಪಡಿಕೊಂಡಿರುವ ಜಮೀನಿನ ವಿಸ್ತೀರ್ಣ ಸುಮಾರು 2, 270 ಚದರಅಡಿ ಮತ್ತು ಒಟ್ಟು ಅಂದಾಜು ಬೆಲೆ ರೂ. 71,732-00 ಮತ್ತು ಪಕ್ಕದ ಜಮೀನಿನ ಮಾಲೀಕರು ಸುಮಾರು 1620 ಅಡಿಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇದರ ಅಂದಾಜು ಬೆಲೆ ರೂ. 51,192-00 (ನಕ್ಷೆಯನ್ನು ಲಗತ್ತಿಸಿದೆ) ಭೂಮಿಯ ಒಟ್ಟು ವಿಸ್ತೀರ್ಣ 31852 ಚದರ ಅಡಿ ಹಾಗೂ ಅಂದಾಜು ಬೆಲೆ ರೂ. 10,06,523-00.